# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

**ನಸದೊ/ಸಾ.ಆ.ವಿ/ವಿ.ಸ.2/2008-09** **ದಿನಾಂಕ:12-01-2009**

## -:: ವಿಶೇಷ ಸಭೆ ನಡವಳಿಕೆಗಳು ::-

ದಿನಾಂಕ:12-01-2009ರಂದು ಸೋಮವಾರ ಬೆಳಿಗ್ಗೆ 11.00ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷರು ಮತ್ತು ನಗರಸಭೆಯ ಎಲ್ಲಾ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| ಸದಸ್ಯರುಗಳು | 29 | 03 | 31 |

ಮೊದಲಿಗೆ ನಗರಸಭೆಯ ಆಯುಕ್ತರಾದ **ಶ್ರೀ ಎಸ್.ಜಿ.ರಾಜಶೇಖರ್‌ರವರು** ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಗರಸಭೆಯ ಎಲ್ಲಾ ಸದಸ್ಯರವರಿಗೂ ಸಭೆಯಲ್ಲಿ ಹೊಸ ವರ್ಷದ ಹಾರ್ಧಿಕ ಶುಭಾಶಯಗಳೊಂದಿಗೆ ಸ್ವಾಗತವನ್ನು ಕೋರಿದರು, ನಂತರ ಸಭೆಯನ್ನು ಪ್ರಾರಂಭಿಸಲು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರಿದರು.

ಮಾನ್ಯ ಅಧ್ಯಕ್ಷರವರು ಸಭೆಗೆ ಹಾಜರಿದ್ದ ಎಲ್ಲಾ ನಗರಸಭಾ ಸದಸ್ಯರುಗಳಿಗೆ ಹೊಸವರ್ಷದ ಶುಭಾಶಯಗಳೊಂದಿಗೆ ಸ್ವಾಗತವನ್ನು ಭಯಸಿ ಸಭೆಯನ್ನು ಪ್ರಾರಂಭಿಸಲು ಅನುಮತಿ ನೀಡಿದರು.

**ವಿಷಯ ಸಂಖ್ಯೆ:1**

2009-10ನೇ ಸಾಲಿನ ಆಯ-ವ್ಯಯ ಮಂಡನೆ ಮಾಡಲು, ಪೂರ್ವಭಾವಿಯಾಗಿ ನಗರದ ಮೂಲ ಭೂತ ಸೌಕರ್ಯಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳ ಬಗ್ಗೆ ಕ್ರಿಯಾ ಯೋಜನೆ ತಯಾರಿಸುವ ಸಂಬಂಧ ಚರ್ಚಿಸಿ, ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಲು ಹಾಗೂ ತಮ್ಮ ತಮ್ಮ ವಾರ್ಡಿಗೆ ಸಂಬಂಧಿಸಿದಂತೆ ಬೇಕಾಗಿರುವ ಮೂಲ ಭೂತ ಸೌಕರ್ಯಗಳ ಬಗ್ಗೆ ಪಟ್ಟಿ ಮಾಡಿ ಒದಗಿಸಿದರೆ ಅದಕ್ಕೆ ತಕ್ಕಂತೆ ಕ್ರಿಯಾಯೋಜನೆಯನ್ನು ರೂಪಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿ, ನಗರದ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ವಿವಿಧ ಅಭಿವೃದ್ಧಿ ಕಾರ್ಯಗಳನ್ನು 2009-10ನೇ ಸಾಲಿನ ಆಯ-ವ್ಯಯ ದಲ್ಲಿ ಅಳವಡಿಸಿಕೊಂಡು ಅಂದಾಜು ಮೊತ್ತವನ್ನು ನಿಗಧಿಪಡಿಸಲು ಸಲಹೆ ಸೂಚನೆಗಳನ್ನು ನೀಡಲಾಯಿತು.

| ಕ್ರ.ಸಂ. | ವಿವರ | ಅಂದಾಜು ಮೊತ್ತ (ಕೋಟಿಗಳಲ್ಲಿ) |
|---|---|---|
| 1 | ನಾಗರಕೆರೆ ಅಭಿವೃದ್ಧಿ ಮತ್ತು ಮೆಶ್ ಕಾಂಪೌಂಡ್ ನಿರ್ಮಾಣ ಹಾಗೂ ಕಟ್ಟೆ ಕೆಳಗೆ ಅಭಿವೃದ್ಧಿ ಕಾಮಗಾರಿ | 1.00 |
| 2 | ಮುತ್ತೂರು ಕೆರೆ ಅಭಿವೃದ್ಧಿಗಾಗಿ | 0.50 |
| 3 | ಅರಳುಮಲ್ಲಿಗೆ ವೃತ್ತದಲ್ಲಿ ಉದ್ಯಾನವನ ಮತ್ತು ರಂಗಮಂಟಪ ನಿರ್ಮಾಣಕ್ಕಾಗಿ | 0.15 |

-2-

| 1 | 2 | 3 |
|---|---|---|
| 4 | ನಗರಸಭೆ ಹತ್ತಿರದ ಉದ್ಯಾನವನ ಅಭಿವೃದ್ಧಿಗಾಗಿ | 0.10 |
| 5 | ಪುಸ್ತಕ ಭಂಡಾರಕ್ಕಾಗಿ (ಗ್ರಂಥಾಲಯ) | 0.10 |
| 6 | ನಗರಸಭಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಾಗಗಳಾದ ಕುಂಟೆಗಳು, ಕಲ್ಯಾಣಿಗಳು, ನಗರಸಭೆಯ ಸ್ವತ್ತುಗಳಿಗೆ ಫೆನ್ಸಿಂಗ್ ಅಳವಡಿಕೆಗಾಗಿ | 0.20 |
| 7 | ಆಧುನಿಕ ಮಾರುಕಟ್ಟೆ ಮತ್ತು ಬಸ್‌ನಿಲ್ದಾಣ ವಿಸ್ತರಣೆಗಾಗಿ | 1.00 |
| 8 | ಊರಿನ ಕೆಲವು ಪ್ರಮುಖ ರಸ್ತೆಗಳ ವಿಸ್ತರಣೆಗಾಗಿ | 2.00 |
| 9 | ಪಂಪ್‌ಹೌಸ್, ಆಲಹಳ್ಳಿ, ಪಾಲನಜೋಗಿಹಳ್ಳಿ ಕೆರೆಗೆ ಜನರೇಟರ್ ಸೌಲಭ್ಯಕ್ಕಾಗಿ | 0.50 |
| 10 | ಊರಿನ ಹೊರಭಾಗಗಳಿಗೆ ಬೀದಿದೀಪಗಳ ಅಳವಡಿಕೆಗಾಗಿ | 1.00 |
| 11 | ನಗರಸಭೆಯ ಹೊಸಕಟ್ಟಡಗಳ ಮುಂಭಾಗ ಪಾರ್ಕಿಂಗ್ ಮತ್ತು ಉದ್ಯಾನವನಕ್ಕಾಗಿ | 1.00 |
| 12 | ನಗರದ ಎಲ್ಲಾ ಕೊಳಚೆ ಪ್ರದೇಶಗಳು ಮತ್ತು ಆಶ್ರಯ ಲೇಔಟ್‌ಗಳ ಅಭಿವೃದ್ಧಿಗಾಗಿ | 1.00 |
| 13 | ಸಾಮೂಹಿಕವಾಗಿ ದೊರೆಯುವ ಮಾರ್ಕೇಟ್ ನಿರ್ಮಾಣ (ಮಾಂಸ, ಕೋಳಿ ಇತರೆ) | 0.25 |
| 14 | ಆಟೋ, ಟ್ಯಾಕ್ಸಿ, ಲಗ್ಗೇಜ್ ಗಾಡಿಗಳಿಗೆ ಪ್ರತ್ಯೇಕ ನಿಲ್ದಾಣಕ್ಕಾಗಿ | 0.10 |
| 15 | ನಗರ ನೈರ್ಮಲ್ಯ ಆಧುನೀಕರಣಕ್ಕಾಗಿ | 0.20 |
| 16 | ನೀರಿನ ಕಾಮಗಾರಿಗಳು ಹೊಸ ಬೋರ್‌ವೆಲ್ ಮತ್ತು ಪೈಪ್‌ಲೈನ್ ಹಾಗೂ ಮೋಟಾರ್ ಪಂಪ್‌ಗಳಿಗಾಗಿ | 1.00 |
| 17 | ನಗರದಲ್ಲಿ ಪ್ರಮುಖ ಕಾಮಗಾರಿಗಳು ಪ್ರತಿ ವಾರ್ಡಿಗೆ 20 ಲಕ್ಷಗಳು | 6.00 |
| 18 | ನಗರದ ಪ್ರಮುಖ ವೃತ್ತಗಳಲ್ಲಿ ರಸ್ತೆ ಸಂಚಾರಕ್ಕೆ ಸಿಗ್ನಲ್ ದೀಪಗಳನ್ನು ಅಳವಡಿಸುವುದು | 0.15 |
| 19 | ನಗರಸಭೆ ಜಾಗದಲ್ಲಿ ಅಗ್ನಿಶಾಮಕದಳದ ಕಟ್ಟಡಕ್ಕಾಗಿ | 0.10 |
| 20 | ನೇಕಾರರ ಉತ್ಪಾದನೆಯ ಹಾಗೂ ಸ್ಥಳೀಯ ಉತ್ಪಾದಕಗಳ ಮಾರಾಟಕ್ಕೆ ಪ್ರತ್ಯೇಕ ಮಳಿಗೆ ನಿರ್ಮಾಣಕ್ಕಾಗಿ | 0.15 |
| 21 | ಡಿ.ಕ್ರಾಸ್ ರಸ್ತೆ ಮತ್ತು ರೋಜಿಪುರ ಏರಿ ರಸ್ತೆಯನ್ನು ಡಬ್ಬಲ್ ರಸ್ತೆಯನ್ನಾಗಿ ಮಾಡುವುದಕ್ಕಾಗಿ | 3.50 |
| | **ಒಟ್ಟು ರೂ.** | **20.00** |

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳಲ್ಲಿ</u>**

**<u>ವಿಷಯ ಸಂಖ್ಯೆ:1/1</u>**

2008–09ನೇ ಸಾಲಿನ ಎಸ್.ಎಫ್.ಸಿ.ಅನುಧಾನದಡಿಯಲ್ಲಿ ಮಳೆನೀರು ಸಂಗ್ರಹಣಾ ಕಾರ್ಯಕ್ಕಾಗಿ ಬಿಡುಗಡೆಯಾಗಿರುವ 3.00ಲಕ್ಷ ರೂ.ಗಳ ಅನುದಾನಕ್ಕೆ ತಯಾರಿಸಿರುವ ಕ್ರಿಯಾ ಯೋಜನೆಯನ್ನು ಅನುಮೋದಿಸುವ ವಿಚಾರ.

–3–

**<u>ತೀರ್ಮಾನ ಸಂಖ್ಯೆ:1/1</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ನಗರಸಭೆಗೆ ಬಿಡುಗಡೆಯಾಗಿರುವ ರೂ.3.00 ಲಕ್ಷಗಳ ಅನುದಾನದಲ್ಲಿ ತಯಾರಿಸಿರುವ ಕ್ರಿಯಾಯೋಜನೆಯಂತೆ, ಈ ಕೆಳಕಂಡ ಸ್ಥಳಗಳಲ್ಲಿ ಬರುವ ನಗರಸಭಾ ಕೊಳವೆಬಾವಿಗಳ ಮಳೆ ನೀರು ಇಂಗು ಗುಂಡಿಗಳನ್ನು ನಿರ್ಮಾಣ ಮಾಡಲು ತಯಾರಿಸಿರುವ ಅಂದಾಜು ಪ್ರತಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಮುಂದಿನ ಕ್ರಮಕ್ಕೈಗೊಳ್ಳಲು ತಿರ್ಮಾನಿಸಲಾಯಿತು.

1) ವಾರ್ಡ್ ನಂ.28ರ ನಗರಸಭಾ ಕಛೇರಿ ಹಿಂಭಾಗದಲ್ಲಿರುವ ಕೊಳವೆಬಾವಿ.

2) ವಾರ್ಡ್ ನಂ.1ರ ಮಧುಗಿರಿ ರಸ್ತೆ ಹಾಸ್ಟೆಲ್ ಪಕ್ಕದಲ್ಲಿರುವ ಕೊಳವೆಬಾವಿ

3) ವಾರ್ಡ್ ನಂ.3ರ ಡಿ.ಕ್ರಾಸ್ ಪೋಲೀಸ್ ಸ್ಟೇಷನ್ ಪಕ್ಕದಲ್ಲಿರುವ ಕೊಳವೆಬಾವಿ

4) ವಾರ್ಡ್ ನಂ.4ರ ನಂದಿಮೋರಿ ಎಡಭಾಗದಲ್ಲಿರುವ ಕೊಳವೆಬಾವಿ

5) ಕುರುಬರಹಳ್ಳಿ ಆಶ್ರಯ ಬಡಾವಣೆ ರಸ್ತೆ ಪಕ್ಕದಲ್ಲಿರುವ ಕೊಳವೆಬಾವಿ

6) ಚಿಕ್ಕತುಮಕೂರು ರಸ್ತೆ ಮುಕ್ತಿಧಾಮ ಹತ್ತಿರವಿರುವ ಕೊಳವೆಬಾವಿ

7) ವಾರ್ಡ್ ನಂ.31ರ ಕುರುಬರಹಳ್ಳಿ ರಸ್ತೆ ಪಕ್ಕದಲ್ಲಿರುವ ಕೊಳವೆಬಾವಿ

8) ನೆಲಮಂಗಲದ ರಸ್ತೆ ಪಕ್ಕದಲ್ಲಿರುವ ಕೊಳವೆಬಾವಿ

---

ಸಹಿ:-
(ಜಿ.ರಾಮಕೃಷ್ಣ)
ಅಧ್ಯಕ್ಷರು,
ನಗರಸಭೆ, ದೊಡ್ಡಬಳ್ಳಾಪುರ.

"ನಕಲು ಪ್ರತಿ "

ಪೌರಾಯುಕ್ತರು,
ನಗರಸಭೆ, ದೊಡ್ಡಬಳ್ಳಾಪುರ.